ನನ್ನ ಜಯಕಾರವನ್ನು ನಾನೇ ಘೋಷಿಸಿಕೊಂಡೆ. ನನ್ನ ಬೆನ್ನನ್ನು ನಾನೇ ತಟ್ಟಿಕೊಂಡೆ. ನಾನು ಬೇರಾರಿಗೂ ಫೋನ್ ಮಾಡದೆ ಮೊದಲು ನನ್ನ ತಾಯಿಗೆ ಫೋನ್ ಮಾಡಿದೆ.

'ಅಮ್ಮಾ, ನಾನು ತಲುಪಿದ್ದೇನೆ'.

'ದೇವಸ್ಥಾನವನ್ನು ತಲುಪಿದ್ದೀಯ?'

'ಹೌದು'.

'ನಿಜವಾಗ್ಲೂ'.

'ಹೌದಮ್ಮಾ, ಹೌದು'.

'ನಾನು ರಾತ್ರಿಯಿಡೀ ನಿದ್ರೆ ಮಾಡಿಲ್ಲ. ಹೇ ಜೀಸಸ್! ನನ್ನ ಪಾಲ್ ಸಮಯಕ್ಕೆ ಸರಿಯಾಗಿ ಕ್ಷೇಮದಿಂದ ತನ್ನ ಗುರಿಯನ್ನು ತಲುಪಲಿ ಎಂದು ಜೀಸಸನ್ನು ಪ್ರಾರ್ಥಿಸುತ್ತಿದ್ದೆ'.

'ನಾನು ತಲುಪಿದ್ದೇನೆ, ಅಮ್ಮಾ, ಧನ್ಯವಾದಗಳು. ಆಮೇಲೆ ಮಾತನಾಡೋಣ'.

'ನಾನೂ ಸ್ವಲ್ಪ ನಿದ್ರೆ ಮಾಡ್ತೀನಿ' ಎಂದು ಅಮ್ಮ ಮೈಮುರಿದಳು.

ರಾತ್ರಿ ಹನ್ನೆರಡು ಗಂಟೆಯಿಂದ ಬೆಳಿಗ್ಗೆ ನಾಲ್ಕರವರೆಗಿನ ನನ್ನ ಪ್ರಯಾಣ ಅತಿ ಕಷ್ಟವಾಗಿತ್ತು ಎಂದು ಇಲ್ಲಿ ಹೇಳಲು ಬಯಸುತ್ತೇನೆ. ಗಾಢ ಅಂಧಕಾರ, ಚಂದಿರನ ಅರೆಬರೆ ಬೆಳಕು. ರಸ್ತೆಯಲ್ಲಿ ಬೇರಾವ ದಾರಿಹೋಕನೂ ಇಲ್ಲ. ನಾನೊಬ್ಬನೇ ಪ್ರಯಾಣಿಕನಾಗಿದ್ದೆ. ಅನೇಕ ಸ್ಥಳಗಳಲ್ಲಿ ನನ್ನ ಹೃದಯ ಬಡಿದುಕೊಳ್ಳುತ್ತಿತ್ತು. ನಾನೆಲ್ಲಿದ್ದೇನೆಂದು ತಿಳಿಯುತ್ತಿರಲಿಲ್ಲ. ನಾನು ದಿಕ್ಕುಗಳು ಮತ್ತು ಸ್ಥಳಗಳನ್ನು ಮರೆಯುತ್ತಿದ್ದೆ. ಆತ್ಮ–ಪ್ರೇತಾತ್ಮ, ಭೂತ–ಪ್ರೇತ ಮತ್ತು ಅಸ್ಥಿಪಂಜರಗಳ ಬಗ್ಗೆ ಯೋಚಿಸುತ್ತಿದ್ದೆ. ಕಾಡು ಪ್ರಾಣಿಗಳ ಭಯ ಸದಾ ಕಾಡುತ್ತಿತ್ತು. ನನ್ನೊಳಗಿನ ಭಯದೊಂದಿಗೆ ಸಂಘರ್ಷಿಸುತ್ತಾ, 'ಆತ್ಮ–ಪರಮಾತ್ಮ ಎಂಬುದಿಲ್ಲ' ಎಂದು ನನಗೆ ನಾನೇ ಧೈರ್ಯವನ್ನು ಹೇಳಿಕೊಳ್ಳುತ್ತಿದ್ದೆ. ನನ್ನ ಧೈರ್ಯವನ್ನು ಹೆಚ್ಚಿಸಿಕೊಳ್ಳಲೋಸುಗ, 'ಮುನ್ನುಗ್ಗು, ಮುನ್ನುಗ್ಗು; ಅಂಧಕಾರದಲ್ಲಿ ಹೆಚ್ಚು ಶಕ್ತಿಯಿರುವುದಿಲ್ಲ. ಎಲ್ಲಾ ಕಾಡುಗಳಲ್ಲಿ ಕಾಡು ಪ್ರಾಣಿಗಳಿರುವುದಿಲ್ಲ ಎಂದು ಹೇಳಿಕೊಳ್ಳುತ್ತಿದ್ದೆ.

ಬೆಳ್ಳಂಬೆಳಿಗ್ಗೆ ನಾಲ್ಕು ಗಂಟೆಗೆ ಹಗಲು ಮೂಡಿದಾಗ ಹಾಗೂ ಐದು ಗಂಟೆಯಾದಾಗ ಒಂದಿಬ್ಬರು ಜನ ಕಾಣ ಬರಲಾರಂಭಿಸಿದರು, ಆಗ ನನಗೆ ಹೋದ ಜೀವ ಬಂದಂತಾಯಿತು.

ನನಗೆ ಪ್ರಾತಃಕಾಲದ ಸಮಯ ತುಂಬಾ ಇಷ್ಟವಾಗುತ್ತದೆ. ನಕ್ಷತ್ರಗಳು ಮುಳುಗುತ್ತಿರುವಾಗ ರಾತ್ರಿ ತನ್ನ ಪಯಣವನ್ನು ಪೂರೈಸಿ ಮುಂಜಾನೆಯನ್ನು ತಬ್ಬಿಕೊಳ್ಳುತ್ತದೆ. ಸೂರ್ಯ ವಿಶಾಲ ಆಗಸದಲ್ಲಿ ತಾನು ಪ್ರಕಟವಾಗಿದ್ದೇನೆಂದು ಹೇಳುತ್ತಾನೆ. ಅವನ ಕಿರಣಗಳಿಂದ ವಸುಧೆ ಮೆಲ್ಲ ಮೆಲ್ಲನೆ ಬೆಳಗುತ್ತಾಳೆ, ಈ ಸಮಯ ನನ್ನನ್ನು ತುಂಬಾ ಆಕರ್ಷಿಸುತ್ತದೆ. ಬೆಳಗಾದಾಗ ನನಗೆ ಮಂದಿರದ ಪ್ರಾಂಗಣ ಕಾಣಬರಲಾರಂಭಿಸಿತು.

***

## ಶ್ರದ್ಧಾಂಜಲಿ

ದೇವಸ್ಥಾನ ನಿರ್ಜನ ಸ್ಥಳದಲ್ಲಿ, ತೆರೆದ ವಾತಾವರಣದಲ್ಲಿದೆ. ದೂರದ ಕ್ಷಿತಿಜದಲ್ಲಿ ಮೇಲೇರುತ್ತಿದ್ದ ಸೂರ್ಯ ತನ್ನ ಕೆಂಬಣ್ಣವನ್ನು ದೇವಸ್ಥಾನದ ಮೇಲೆ ಚೆಲ್ಲುತ್ತಿದ್ದಾನೆ. ಅದ್ಭುತ ದೃಶ್ಯ! ನಾನು ಸುತ್ತಮುತ್ತ ದೃಷ್ಟಿ ಹಾಯಿಸುತ್ತಾ ದೇವಸ್ಥಾನದ ಪವಿತ್ರ ಪ್ರಾಂಗಣದಲ್ಲಿ ಕಾಲಿಟ್ಟೆ. ನಂತರ ಮೆಲ್ಲ ಮೆಲ್ಲನೆ ಪ್ರವೇಶ ದ್ವಾರದೆಡೆಗೆ ಮುಂದುವರೆದೆ. ನನ್ನ ಗುರಿಯನ್ನು ತಲುಪಿದ ನಂತರ ಇದ್ದಕ್ಕಿದ್ದಂತೆ ನನ್ನ ಹೆಜ್ಜೆಗಳು ತುಂಬಾ ನಿಧಾನವಾದವು.

ಪೂಜಾರಿಗಳು ಬಾಗಿಲು ತೆರೆಯುತ್ತಾ ಕೇಳಿದರು, 'ನಡೆದು ಬಂದಿರುವಂತಿದೆ?'

'ಹೌದು, 108 ಕಿ.ಮೀ.'

'108 ಕಿ.ಮೀ.!

ಎಂದಿನಿಂದ ನಡೆಯುತ್ತಿದ್ದೀರ?'

'ಮೊನ್ನೆ ರಾತ್ರಿಯಿಂದ'.

'ಎಲ್ಲೂ ವಿಶ್ರಾಂತಿಯನ್ನು ಪಡೆಯಲಿಲ್ಲವೇ?'

'ಸ್ವಲ್ಪ, ಹೆಚ್ಚಿಲ್ಲ'.

ಒಂದು ಇಡೀ ಕಟ್ಟಡ ದೇವಸ್ಥಾನದ ಅಧೀನದಲ್ಲಿತ್ತು. ಒಂದು ಕಡೆ ದೇವರ ದರ್ಬಾರು, ಇನ್ನೊಂದೆಡೆ ಕೊಠಡಿಗಳು, ಅಡುಗೆ ಮನೆ, ಡೈನಿಂಗ್ ಹಾಲ್ ಮತ್ತು ಸ್ನಾನ–ಶೌಚಾಲಯಗಳಿದ್ದವು. ಪೂಜಾರಿಗಳು ನನ್ನನ್ನು ಒಂದು ಗುಡಿಸಲಿಗೆ ಕರೆದೊಯ್ದರು. ನಾನು ತುಂಬಾ ದಣಿದಿದ್ದೆ, ಹೀಗಾಗಿ ಗುಡಿಸಲಿನಲ್ಲಿ ಹಾಸಿದ್ದ ಜಮಖಾನೆಯ ಮೇಲೆ ಮಲಗಲು ಮನಸ್ಸಾಯಿತು.

'ನೀವಿಲ್ಲಿ ವಿಶ್ರಾಂತಿಯನ್ನು ಪಡೆಯಬಹುದು' ಎಂದು ಪೂಜಾರಿಗಳು ಇಂಗ್ಲಿಷಿನಲ್ಲಿ ಹೇಳಿದರು. ಅವರು ಇಂಗ್ಲಿಷ್ ಚೆನ್ನಾಗಿ ಮಾತನಾಡುತ್ತಿದ್ದರು. ಅವರೊಂದಿಗೆ ಮಾತನಾಡುವುದು ಸುಲಭವಾಯಿತು. ನನ್ನ ಬಳಿ ಈಗ ಯಾವುದೇ ಸಂಘರ್ಷಕ್ಕಿಳಿಯುವ ಶಕ್ತಿ ಇರಲಿಲ್ಲ.

ಪೂಜಾರಿಗಳು ಬಾತ್‌ರೂಮ್ ಮತ್ತು ಅಡುಗೆ ಮನೆಯನ್ನು ತೋರಿಸಿ ಹೇಳಿದರು, 'ನೀವು ಸ್ನಾನ ಮಾಡಿ ತಿಂಡಿ ತಿನ್ನಿ, ವಿಶ್ರಾಂತಿಯನ್ನು ಪಡೆಯಿರಿ. ಪೂಜೆಗೆ ಇನ್ನೂ ಸಮಯವಿದೆ. ಇಲ್ಲಿಗೆ ಮೊದಲು ಬಂದವನು ನಾನೇ.'

'ನನ್ನ ಬಳಿ ಏನೂ ಇಲ್ಲ. ಎಲ್ಲವೂ ರಸ್ತೆಯಲ್ಲಿ ಕಳ್ಳತನವಾಯಿತು'. ಪೂಜಾರಿಗಳು ಸ್ವಲ್ಪ ಯೋಚಿಸಿದರು, ನಂತರ ನನ್ನ ಆಕಾರವನ್ನು ಮನಸ್ಸಿನಲ್ಲಿ ಅಳೆದರು, ನಂತರ ಎಲ್ಲಿಂದಲೋ ಒಂದು ಟವಲ್, ಒಂದು ಹೊಸ ಕುರ್ತಾ ಮತ್ತು ಪೈಜಾಮವನ್ನು ತಂದು ನನಗೆ ಕೊಟ್ಟರು. ಕಿತ್ತಳೆ ಬಣ್ಣದ ಕುರ್ತಾ ಮತ್ತು ಬಿಳಿಯ ಪೈಜಾಮವನ್ನು ತೆಗೆದುಕೊಂಡು ಅವರ ಆದೇಶವನ್ನು ಪಾಲಿಸಿದೆ. ಮೊದಲು ಬಾತ್‌ರೂಮಿಗೆ ಹೋದೆ. ಬಾತ್‌ರೂಮಿನಲ್ಲಿ ಹಾಕಿದ್ದ ಕನ್ನಡಿಯಲ್ಲಿ ನನ್ನ ಮುಖವನ್ನು ನೋಡಿಕೊಂಡಾಗ, ನನ್ನನ್ನು ನಾನೇ ಗುರುತಿಸದಾದೆ. ತಲೆಗೂದಲುಗಳು ಕೆದರಿದ್ದವು, ಮುಖ ಬಾಡಿತ್ತು, ತುಟಿಗಳಲ್ಲಿ ಚರ್ಮದ ಸಿಪ್ಪೆ ಕಾಣುತ್ತಿತ್ತು. ಕಣ್ಣುಗಳು ಒಳಗೆ ಹೂತಿದ್ದವು. ನಾನು ವೃದ್ಧನಂತೆ ತೋರುತ್ತಿದ್ದೆ. ಒಂದು ರಾತ್ರಿಯ ಪ್ರಯಾಣ ನನ್ನ ರೂಪವನ್ನೇ ಬದಲಾಯಿಸಿತ್ತು.

ನಾನು ಸ್ನಾನ ಇತ್ಯಾದಿಗಳನ್ನು ಪೂರೈಸಿ ನನ್ನ ಅಳತೆಯ ಪೈಜಾಮ ಮತ್ತು ಕುರ್ತಾ ಧರಿಸಿದೆ. ಪೂಜಾರಿಗಳ ಕಣ್ಣುಗಳು ಪರೀಕ್ಷಿಸುವಲ್ಲಿ ನಿಪುಣವಾಗಿವೆ. ನಾನು ಸಿದ್ಧನಾಗಿ ಕಿಚನ್‌ಗೆ ಬಂದೆ. ಮೂವರು ಅಡುಗೆ ಮಾಡುತ್ತಿದ್ದಾರೆ. ಎಣ್ಣೆ ಮತ್ತು ಮಸಾಲೆಗಳ ಸುವಾಸನೆ ಗಾಳಿಯಲ್ಲಿ ತೇಲುತ್ತಿದೆ.

'ಕೋಪನ್‌ಹೇಗನ್‌ನಿಂದ ಇಲ್ಲಿಗೆ ಕಾಲ್ನಡಿಗೆಯಲ್ಲಿ ಬಂದ ಪಾದಯಾತ್ರಿಗಳು ನೀವೇನಾ?' ಎನ್ನುವ ಪ್ರಶ್ನೆಗೆ ನಾನು ಹೌದೆಂದು ತಲೆಯಾಡಿಸಿದೆ.

ಅವರು ನನ್ನನ್ನು ಗೌರವದಿಂದ ನೋಡಿದರು. ತುಂಬಾ ಪ್ರೀತಿಯಿಂದ ಕಾಫಿ ಮತ್ತು ತಿಂಡಿಯ ತಟ್ಟೆಯನ್ನು ಕೊಟ್ಟರು. ತಟ್ಟೆಯಲ್ಲಿ ಪೊಂಗಲ್ ಮತ್ತು ವಡೆಗಳಿದ್ದವು. ನೀನಾಳೊಂದಿಗೆ ದೀಪಾವಳಿ, ಸಂಕ್ರಾಂತಿ ಮತ್ತು ಇನ್ನಿತರ ವಿಶೇಷ ಹಬ್ಬಗಳಲ್ಲಿ ಅವಳ ತಂದೆ ತಾಯಿಯ ಮನೆಗೆ ಹೋಗುತ್ತಿದ್ದೆ. ಆಗ ನನಗೆ ತಿನ್ನಲು ಇಡ್ಲಿ, ದೋಸೆ, ರಸಂ, ಸಾಂಬಾರ್, ಪೊಂಗಲ್ ಸಿಗುತ್ತಿತ್ತು. ಈ ವೇಳೆಯಲ್ಲಿ ಬಿಸಿ ಬಿಸಿ ಕಾಫಿ ಮತ್ತು ಪೊಂಗಲ್ ತುಂಬಾ ಇಷ್ಟವಾಯಿತು. ತಿಂಡಿಯ ಅಮೂಲ್ಯ ರುಚಿ ಮತ್ತು ಸ್ವಾದಕ್ಕೆ ಮನಸೋತೆ. ಎಷ್ಟೋ ಯುಗಗಳ ನಂತರ ಇಂಥ ಸ್ವಾದಿಷ್ಟ ತಿನಿಸುಗಳನ್ನು ತಿನ್ನುತ್ತಿದ್ದೇನೆಂದು ಅನ್ನಿಸಿತು.

ತಿಂಡಿ ತಿಂದ ನಂತರ ಶರೀರ ಭಾರವಾಯಿತು. ವಿಶ್ರಾಂತಿ ಪಡೆಯಲು ಕೂತು ಕೂತಲ್ಲಿಯೇ ತೂಕಡಿಸಿದೆ. ಶರೀರ ನಿದ್ರೆಯ ಮಡಿಲಿಗೆ ಜಾರಿತು. ಮೂರ್ಛಾವಸ್ಥೆಯ ನಿದ್ರೆ! ಆದರೆ ನನ್ನ ಮೆದುಳಿನಲ್ಲಿ, ನಾನು ಪೂಜೆಗೆ ಹೋಗಬೇಕು, ನೀನಾಳ ಪ್ರಥಮ ವಾರ್ಷಿಕ ಶ್ರಾದ್ಧದಲ್ಲಿ ಭಾಗವಹಿಸಬೇಕೆಂಬ ವಿಚಾರ ಸಹ ಹೊಳೆಯುತ್ತಿದೆ. ಇಷ್ಟು ದೂರ ಬಂದು ಪೂಜೆಯಲ್ಲಿ ಭಾಗವಹಿಸದಿದ್ದರೆ, ಪಾದಯಾತ್ರೆ ಅರ್ಥಹೀನವಾಗುತ್ತದೆ.

ನಾನೆದ್ದು ನನ್ನ ಬಟ್ಟೆಗಳನ್ನು ಸರಿಪಡಿಸಿಕೊಂಡೆ, ತಲೆ ಬಾಚಿಕೊಂಡೆ. ನಂತರ ದೇವಸ್ಥಾನದ ಮುಖ್ಯದ್ವಾರವನ್ನು ಪ್ರವೇಶಿಸಿದೆ. ಒಳಗೆ ಸಿದ್ಧಿ ವಿನಾಯಕನ ಕಂಚಿನ ವಿಶಾಲ ಮೂರ್ತಿಯೊಂದು ಕಂಡಿತು. ಆನೆಯ ಶಿರವುಳ್ಳ ವಿನಾಯಕ. ಗಣೇಶನ ಅಭಿಷೇಕಕ್ಕೆ ಸಿದ್ಧತೆಗಳು ನಡೆಯುತ್ತಿದೆ. ಆರತಿ ಮತ್ತು ಗಂಧದ ಕಂಪು, ಭಕ್ತಿಪೂರ್ವಕ ಭಜನೆ. ಈ ಧ್ವನಿಯನ್ನು ಈ ಮೊದಲೂ ಕೇಳಿದ್ದೇನೆ.

ಜಯ ಗಣೇಶಾ ಸಂತ ಹಿತಕಾರಿ ಸುನಿಯೆ ಜಯ ಪ್ರಭು ವಿನಯ್ ಹಮಾರಿ

ನೀನಾಳ ಮುಗುಳ್ನಗುವ ಒಂದು ದೊಡ್ಡ ಭಾವಚಿತ್ರವನ್ನು ಮಧ್ಯದಲ್ಲಿ ಹಾಕಲಾಗಿದೆ. ಭಾವಚಿತ್ರದ ಕೆಳಗೆ ದೀಪ ಉರಿಯುತ್ತಿದೆ, ಅದರ ಬೆಳಕು ನೀನಾಳ ಮುಖದ ಮೇಲೆ ಬೀಳುತ್ತಿದೆ. ಸಾಕಷ್ಟು ಜನ ದೇವಸ್ಥಾನಕ್ಕೆ ಬಂದಿದ್ದಾರೆ. ನೀನಾಳ ತಂದೆ ತಾಯಿ, ಅವರ ಪರಿಚಿತ ಭಾರತೀಯ ಮಿತ್ರರು, ನೀನಾಳ ಇಬ್ಬರು ಪುತ್ರಿಯರು ಮತ್ತು ಅಳಿಯ ಸಹ ಕಾಣಿಸುತ್ತಿದ್ದಾರೆ. ಕರೀನಾಳ ಚಿಕ್ಕ ಮಗು, ಬಹುಶಃ ಆರೇಳು ತಿಂಗಳಿರಬೇಕು, ಒಬ್ಬರ ಮಡಿಲಿನಲ್ಲಿದೆ. ಎಲ್ಲರೂ ಇಂದು ಭಾರತೀಯ ಉಡುಪುಗಳಲ್ಲಿ ಅಂದರೆ ಬಿಳಿ ಮತ್ತು ಕೇಸರಿ ಬಣ್ಣದ ಬಟ್ಟೆಗಳನ್ನು ಧರಿಸಿದ್ದಾರೆ. ಅನೇಕರ ಕೈಯಲ್ಲಿ ದಿನಪತ್ರಿಕೆಗಳಿವೆ.